RegdNo B G155

13—8—1955

ಸತ್ಯವಾದಿ

43th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆ ಸಿಂಸ್ಕೇದಾರ್ ಎಂ ವಿ ಸುಬ್ಬರಾಯುರು

ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ನಾಯಿಗಳ ದೈವಭಕ್ತಿ

ಉಕ್ಕರ ಬೇಹಾರಿನ ವೈಂಜ್ಞಿಯಾಳ್ಳಿನ ಶಿವದೇವಾಲಯದ ಬಾಗಲು ಮುಂದೆ ಬೆಳಿಗ್ಗೆ ಮಕ್ಕು ಸಂಜೆ ವಂಗಳಾತಿಯು ಗಟಿ ಹೊಡೆಯುವ ಸಮಯದಲ್ಲಿ ಎಂಡು ನಾಯಿಗಳು ಬಂದ ಭಕ್ತಿಯ ಶವಾಗಿ ನಿಂತು ವಿನದಿಂದ ಕಣ್ಣೀರು ಸುರಿಸುತ್ತವೆ ; ಮಿಕ್ಕ ಹೊತ್ತಿನಲ್ಲಿ ಇತರ ನಾಯಿಗಳಂತೆ ಅಲ್ಲಿಇಲ್ಲಿ ಟಿರಿತ್ತಾಡಿಕೊಂಡಿರುತ್ತವೆ.

ಆಂಧ್ರಪ್ರದೇಶದಲ್ಲಿ ಪಾನನಿರೋಧದ ಸ್ಥಾನಸ್ಥ

ಹೈದರಾಬಾದಿನಲ್ಲಿ ಪಾನನಿರೋಧ

ಬೈದರಾಬಾದು:— ಆಂಧ್ರಪ್ರದೇಶದ ಪಾನನಿರೋಧ ಸ್ಥಳಗಳಲ್ಲಿ ಹೆಂಡ ಇಳಿಸಿ, ಪಾನನಿರೋಧವಿಲ್ಲದ ತೆಲಂಗಾಣಾ ಭಾಗಕ್ಕೆ ಪೂರಾಟಕ್ಕಾಗಿ ಕಳಿಸುವ ವ್ಯವಸ್ಥೆಯನ್ನು ಶಾಸನಸಭೆಯು ಅಂಗೀಕರಿಸಿತು — ಆಂಧ್ರಪ್ರದೇಶದಲ್ಲಿ ಪಾನನಿರೋಧವು ವಿಫಲವಾಗಿದೆಯೆಂದು ಸದಸ್ಯರು ಆಪಾದಿಸಿದರು ಮತ್ತು ಮಂತ್ರಿಗಳು ತಕ್ಕವಟ್ಟಿಗೆ ಹೌದೆಂದರು — ಪಾನನಿರೋಧವನ್ನು ಪೂರ್ಣವಾಗಿ ರದ್ದು ಪಡಿಸಬೇಕೆಂದು ಕೆಲ ಸದಸ್ಯರು ಆಗ್ರಹ ಪೂರ್ವಕ ವ್ಯಕ್ತಪಡಿಸಿದರು.

★

ಅಮರಾನಂತ ಉಪವಾಸ

ಹೈದರಾಬಾದು:— ಸರ್ವೋದಯ ಕಾರ್ಯಕರ್ತರ ಅಧಿಕೃತ ಆಂಧ್ರ ಪ್ರದೇಶದ ಪಾನನಿರೋಧ ಸಮಿತಿ ಅಧ್ಯಕ್ಷ ಸಾಧು ಸುಬ್ರಹ್ಮಣ್ಯಂ ರಾಜ್ಯಾದ್ಯಂತ ಪಾನನಿರೋಧ ಜಾರಿಯಾಗಬೇಕೆಂದು ಪೊಸ್ಟೆಯಿಂದ ಅಮರಣಾಂತ ಉಪವಾಸ ಪ್ರಾರಂಭಿಸಿರುವರು

★

ಖಂಡನೆ

ಕರ್ನಾಟಕ ಎಸ್ಸೆಸ್ಸೆ ಅಧ್ಯಕ್ಷ ಶ್ರೀ ಗೋಪಾಲಗೌಡರು, ಭಾರತ ರಕ್ಷಣಾ ವಿಧಿಯಂತೆ ಮಂಗಳವಾರ ಪಾಟ್ನಾದಲ್ಲಿ ಡಾ॥ ಲೋಹಿಯಾರನ್ನು ದಸ್ತಗಿರಿ ಮಾಡಿರುವುದಕ್ಕಾಗಿ ಭಾರತ ಸರಕಾರವನ್ನು ಖಂಡಿಸಿ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿರುವರು

❋

ಸರಕಾರ ಒಪ್ಪಲಿಲ್ಲ

ಚಂಡೀಘರ — ಪಂಜಾಬಿನ ಮಾಜಿ ಮುಖ್ಯ ಮಂತ್ರಿ ದಿ॥ ಪ್ರತಾಪಸಿಂಗ್ ಕೈರಾನರ ಮಕ್ಕಳು, ತಮ್ಮ ಆಸ್ತಿಯಲ್ಲಿ ಕೆಲವು ಭಾಗವನ್ನು ರಾಷ್ಟ್ರಕ್ಕೆ ಉಪಸಮರ್ಪಣೆ ಮಾಡಿದ ಮನವಿಯನ್ನು ಸರಕಾರ ತಿರಸ್ಕರಿಸಿದೆ

❋

ಲೋಹಿಯಾ ದಿನ

ಪಾಟ್ನಾದಲ್ಲಿ ಡಾ॥ ಲೋಹಿಯಾರನ್ನು ಭಾರತರಕ್ಷಣಾ ವಿಧಿ ಪ್ರಕಾರ ಬಂಧಿಸಿರುವುದನ್ನು ಪ್ರತಿಭಟಿಸಲು ಶಾ॥ 16 ರಂದು ಲೋಹಿಯಾ ದಿನವಾಗಿ ಆಚರಿಸಲು ಎಸ್ಸೆಸ್ಪಿ ಜನರಲ್ ಸೆಕ್ರೆಟರಿ ಕೋರಿರುವರು

ಪಾಕಿಸ್ತಾನಿ ಅತಿಕ್ರಮಣಕಾರರು

ನವದೆಹಲಿ— ಚುಬಗಡಿ ಹತ್ತಿರ ಭಾರತಕ್ಕೆ ಸ್ಸೇರಿದ ಶಕ್ಸ್‌ಗಾಮ್ ಕಣಿವೆಯಲ್ಲಿ ಪಾಕಿಸ್ತಾನಿಗಳನ್ನು ನಮ್ಮ ಸೇನೆಯವರು ಹಿಂದಕ್ಕೆ ಅಟ್ಟಿಕೊಂಡು ಹೋಗಿ 150 ಮಂದಿಯನ್ನು ಕೊಂದು 33 ಮಂದಿಯನ್ನು ದಸ್ತಗಿರಿ ಮಾಡಿರುವರು.

❋

ಅಶ್ರುವಾಯು ಪ್ರಯೋಗ

ಹೈದರಾಬಾದು— ಉಸ್ಮಾನಿಯಾ ವಿಶ್ವವಿದ್ಯಾಲಯದ ಶಕ್ತಿಮಂತ್ರ ವಿದ್ಯಾರ್ಥಿಗಳ ಗುಂಪನ್ನು ಚದರಿಸಲು ಪೋಲೀಸರು 3 ಸಾರಿ ಅಶ್ರುವಾಯು ಪ್ರಯೋಗ ಮಾಡಬೇಕಾಯಿತು ಪ್ರಯೋಗ ಮಾಡಿದರು — ಗಲಭೆಯಲ್ಲಿ 15 ಮಂದಿ ಪೋಲೀಸರೂ ಸೇರಿ 55 ಮಂದಿ ಗಾಯಗೊಂಡರು

ಗೋವಧೆಯೇ ಆಹಾರಸಮಸ್ಯೆಗೆ ಕಾರಣ

ಮೈಸೂರು— ಗೋವಧೆಯೇ ಆಹಾರ ಸಮಸ್ಯೆಗೆ ಕಾರಣ, ಲಕ್ಷಾಂತರ ಗೋವಧೆ ನಡೆಯುತ್ತಿದ್ದರೆ ಅವುಗಳಿಂದ ಕಣ್ಣೀರು ಬಿದ್ದರೆ ಆಹಾರ ಅಭಾವಬಾರದೇ ಇನ್ನೇನಾದೀತು ಎಂದು ಡಾ॥ ಡಿ ಜಿ. ತಾಸ್ಕಂಡ್ಡಿಮೊನ್ನೆ ಪುಸಭೆಯ ವಿಶೇಷ ಸಭೆಯಲ್ಲಿ ತಿಳಿಸಿದರು ; ಜನತೆ ಸರ್ಕಾರಕ್ಕೆ ಸೈತಿಕತೆ ಹೋಗಿರುವುದೇ ಇಂದಿನ ಆಹಾರ ಅಭಾವಕ್ಕೆ ಕಾರಣ ಸಹಾ ಆಗಿದೆ ; ಯಜ್ಞಯಾಗಾದಿಗಳು ನಡೆದರೆ ಕಾಲಕಾಲಕ್ಕೆ ಮಳೆ ಬೀಳುವುದು ; ಹಾಗಿಲ್ಲದೆ ಹೋದರೆ ಆಹಾರ ಉತ್ಪಾದನೆ ಆಗಬೇಕಾದರೆ ಆಗುವುದೇ ಎಂದು ಹೇಳಿದರು ; ಸರ್ಕಾರ ಒಂದು ಬೆಲೆ ಗೊತ್ತು ಮಾಡುವುದು, ವರ್ತಕರು ಮತ್ತೊಂದು ಬೆಲೆಯಲ್ಲಿ ಮಾಡುವುದು, ಗಾದರೆ ಅರ್ಥವೇನು ? ಬೆಲೆ ಇಳಿಯುಲು ಸಾಧ್ಯವೇ ಎಂದೂ ಡಾ॥ ದಾಸರು ತಿಳಿಸಿದರು

★

ನವದೆಹಲಿ— ಮುಂದಿನ ಐದು ವರ್ಷಗಳಲ್ಲಿ ವ್ಯವಸಾಯ ಯೋಜನೆಯೊಂದನ್ನು ಪ್ರಧಾನಿಗಳ ಸೂಚನೆಯಂತೆ ತಯಾರಿಸಲಾಗುತ್ತಿರುವುದಾಗಿ ತಂದಿ.

ನಾಳೆಯ ಪಂಚಾಂಗ

ವೈದ್ಯ ಶಿರೋಮಣಿ
ಅಷ್ಟಾವಧಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯವ್ಯವಸ್ಥ, ಜ್ಯೋತಿರ್ವಿದ್ವನ್ಮಣಿ
ಪಂಡಿತ ಕೃಷ್ಣಜೋಯಿಸಂವರಿಂದ
14 ಶನಿವಾರ ಬುದಿಗೆ ಶಕಭಿಷ

ಸ್ವಾತಂತ್ರ್ಯ ದಿನೋತ್ಸವ

ಮೈಸೂರು— ಪುರಸಭೆಯ ಆಶ್ರಯದಲ್ಲಿ ಎಂದಿನಂತೆ ಈ ವರ್ಷವೂ ಸ್ವಾತಂತ್ರ್ಯ ದಿನೋತ್ಸವವು ಟೌನ್‌ಹಾಲಿದಲ್ಲಿ ಭವ್ಯವಾಗಿ ನೆರವೇರುವುದು.

★

ಪಂಚಾಯಿತಿ ಚುನಾವಣೆ

ಮಂಗಳೂರು— ಈ ಜಿಲ್ಲೆಯಲ್ಲಿ ಪಂಚಾಯ್ತಿ ಚುನಾವಣೆಯನ್ನು ಮುಂದಕ್ಕೆ ಹಾಕಲು ಜನಸಂಘದ ಕೋರಿಕೆ.

❋

ಪರಿಹಾರ

ಮಳವಳ್ಳಿ— ಮಂಗಾರು ಮಳೆಯಿಲ್ಲದೆ ತೊಂದರೆಯಾಗಿರುವುದರಿಂದ ಸರಕಾರವು ಈ ವರ್ಷ ಭೂಕಂದಾಯ ಮನ್ನಾ ಮಾಡಬೆಕೆಂದೂ ಎಲ್ಲ ಬಡ ಸಾಲದ ವಸೂಲಿಯನ್ನೂ ನಿಲ್ಲಿಸಬೇಕೆಂದೂ ತಾಲ್ಲೂಕು ಬೋರ್ಡ್ ನಿರ್ಧರಿಸಿದೆ.

❋

ಸಾರಾಯಿ ವಶ

ಹೆಂಗಳೂರು— ಮಂಗಳವಾರ ರಾತ್ರಿ ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಹತ್ತಿರ ಒಂದು ಕಾರು ಮತ್ತು ಟ್ಯಾಕ್ಸಿಯಲ್ಲಿ ರೂ 10000 ಬೆಲೆಯ 420 ಗ್ಯಾಲನ್ ಅಕ್ರಮ ಸಾರಾಯಿಸ್ನು ವಶಪಡಿಸಿಕೊಂಡು 3 ಮಂದಿಯ ದಸ್ತಗಿರಿಯಾಗಿದೆ.

❋

ಶ್ರೀನಗರದಲ್ಲಿ ಪರಿಸ್ಥಿತಿ ಪರಿಶೀಲಿಸಲು ಗೃಹಮಂತ್ರಿ ನಂದಾರವರು ಅಲ್ಲಿಗೆ ಹೋಗಿರುವರು.

ಇದೂ ಕ್ರೀಡೆ

ಲಂಸ್ಕಾದ ಲಿವಿಂಡರ್ಪ್ಟ್ನಿನಲ್ಲಿ ನಡೆದ ಕಾಲ್ಚೆಂಡಾಟ ಸಂಬಂಧಿಸಿದ ಹೃದಯವಿದ್ರಾವಕ ವಾರ್ತೆ. ಆಟದಲ್ಲಿ ಒಬ್ಬ ಆಫ್ರಿಕಾ ಸ್ಕೂಲು ಹುಡುಗನು ಹೊಡೆದ ಸಾಯಿಸಲ್ಪಟ್ಟನು : ಈ ಹುಡುಗ ಎಂಡು ಗೋಲ ತಳನ್ನು ಹೊಡೆದು ಕಮ್ಮಿ ಟೀಮು ಗೆಲುವಂತೆ ಮಾಡಿದನು : ಇದಕ್ಕೆ ಕೋಧಗೊಂಡ ಎದುರು ಪಕ್ಷದವರು ಆ ಹುಡುಗನನ್ನು ಹೊಡೆದು ಹೊಡೆದು ಸಾಯಿಸಿದರು.

★

ಇದೊಂದು ಹುಚ್ಚು

ಟಿಬೆಟ್ಟಿನಲ್ಲಿ ಹುಟ್ಟುವ ಬ್ರಹ್ಮಪುತ್ರವೂ ಸೇರಿ ಏಷ್ಯದ ದೊಡ್ಡ ನದಿಗಳ ನೀರನ್ನು ವಂಗೋಲಿಯಾದ ಗೋಬಿ ಮರಳು ಕಾಡಿಗೆ ಹರಿಸಿ ಅದನ್ನು ಫಲವತ್ತು ಮಾಡುವ ಸೆಲುವಾಂಗ್ಶಿಕನಸು ಕಾಣಲಾಗುತ್ತಿದೆ.

‡ ಇದೇತಕ್ಕ ಹುಚ್ಚು ಆ ದೊಡ್ಡ ನದಿಗಳ ಪೈಕಿ ಬ್ರಹ್ಮಪುತ್ರ ಮತ್ತು ಸಿಲಧು ಭಾರತದ್ದು, ಅವನ್ನು ವೇಲಕ್ಕೆ ತಿರುಗಿಸಿ, ಭಾರತಕ್ಕೆ ಅವುಗಳ ನೀರು ತಪ್ಪಿದರೆ ಭಾರತವು ಬಂಜರು ಮತ್ತು ಫಲವತ್ತಿಲ್ಲದ ದೇಶವಾಗುವುದು!

★

ತುಳು ಗಾದೆಗಳು

ಮನುಷ್ಯನು ಮಾಡಿದ್ದಕ್ಕೆ ಅಳವು ಉಂಟು ದೇವರು ಮಾಡಿದ್ದಕ್ಕೆ ಅಳವು ಇಲ್ಲ.

ವೈಕುಂಬಾ ಚಿನ್ನಾಭರಣಗಳನ್ನು ತೊಟ್ಟುಕೊಳ್ಳದಿದ್ದರೆ ಶ್ರೀವುಂತರು ಬಡವರಾಗುವರೇ ?

ವೈಕುಂಬಾ ಚಿನ್ನಾಭರಣ ಹಾಕಿಕೊಂಡರೆ ಬಡವರು ಶ್ರೀವುಂತರಾಗುವರೇ ?

ಸತ್ಯದ ಒಳ್ಳೆತನ ಸಾಯುವಾಗ ಕಂಡೀತು, ವಿಶ್ವದ ಒಳ್ಳೆತನ ನಿತ್ಯದಲ್ಲಿ ಕಾಂಡೀತು.

ಊಣ್ಣಲಿಕ್ಕೆ ತಿನ್ನಲಿಕ್ಕೆ ಬಂಗಾಲವಾದರೂ ಬಾಲಿಗೆ ಬರಕಾಲ ಬರಬಾರದು.

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಸ್ವದೇಶದಲ್ಲಿ ಗೋರಕ್ಷಣೆ ವ್ಯಾಪಾರದಲ್ಲಿ, ಕಾಲಾಹಾರ, ಪಶುವೈದ್ಯ ವಿಚಾರಗಳಂದ ತುಂಬಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ನೈಪೈಸೆ.

ಶ್ರೀ ಪಾಲ್ಕುರಿಕೆ ಜಗದ್ಗುರು ಮಹಾಸಂಸ್ಥಾನಿಗಳವರು, ಶ್ರೀಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಗಳವರು ಆಶೀರ್ವಾದ ಅನುಗ್ರಹಕೃಪೆಯಾಗಿದೆ

ಪಡಿಯೊಳಗು ರೂ 10, ಪ್ರೋತ್ಸಾಹಕರು ರೂ 25 ; (ಒಂದು ಸಾರಿ ಮಾತ್ರ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ಮಂದಸಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

Protect the Cow

ಗೋರಕ್ಷಣೆಗೆ ಮತ್ತು ಪಾಲನೆಯಲ್ಲಾ ಕಾರ್ಯಗಳು ಹೆಚ್ಚಿ ಚಾಲ್ತಿಗೆ ನಡೆಯುತ್ತಿವೆ

ವುಡಲ್ಯಾಂಡ್ಸ್ ಕೀರ್ತಿಯುತ 3 ನೇ ವಾರ

ಜಾಹೀರು ಮುಖರ್ಜಿ — ರಾಜಶ್ರೀಯವರ ಕಲಾತ್ಮಕ ಅಭಿನಯದಿಂದ ಕೂಡಿದ

.... ಚಿತ್ತಾಕರ್ಷಕ ಹಿಂದಿ ಚಿತ್ರವಂತ್ತ ....

ಜೀ ಚಾಹ'ತಾ ಹೈ

★ Ji Chahta Hai ★

ಸಂಗೀತ : ಕಲ್ಯಾಣಜೀ ಆನಂದಜೀ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 13-7-65 ರಿಂದ

ನರಸಾ, ಬಿ. ಎ.

ಪಾತ್ರ— ಭಾನುಮತಿ, ಬಾಲರಾಜ್, ಎಂ. ಆರ್. ರಾಧಾ, ತಾಯಿ ನಾಗೇಶ್

ಅನೋಪ ಕವಿಗಳು ಸಾಂಸಾರಿಕ ಚಿತ್ರ] [ಪ್ರತಿ ದಿನ 3 ಆಟಗಳು

SHAKTI

SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ಹೊಲೆಯುಳ್ಳವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುವುದು

Edited, Printed & Published by Dharma prachara nirata M S Krishna Rao (Proprietor) at the Satyavadi Press Chamarajapuram, Mysore 4